## ಟಿ. ತಿಮ್ಮಪ್ಪ



ನವಿರಾದ ಕಥೆ ಕಾದಂಬರಿ ಮುಂತಾದ ಬರಹಗಳ ಮೂಲಕ ಕನ್ನಡ ಸಾರಸ್ವತ ಲೋಕದಲ್ಲಿ ಹೆಸರು ಮಾಡಿರುವ ಟಿ. ತಿಮ್ಮಪ್ಪ ಓದುಗರಿಗೆ ಚಿರಪರಿಚಿತರು. ಮೈಸೂರು ವಿಶ್ವವಿದ್ಯಾನಿಲಯದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರ. ಬಾಲ್ಯದಿಂದಲೂ ಕನ್ನಡ ಸಾಹಿತ್ಯದ ನಿರಂತರ ಓದುಗ. ಸ್ವಂತ ಊರು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ತಿಪ್ಪೂರು ಗ್ರಾಮ. ಪ್ರಸ್ತುತ ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್ ನ ಯಾಂತ್ರಿಕ ವಿಭಾಗದಲ್ಲಿ ಆಯ್ಕೆ ಶ್ರೇಣಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ತಿಮ್ಮಪ್ಪ ಅವರು ಬರೆದ 'ಜಂಬೂಕ' ಹಾಗೂ 'ಯಶೋದಾ' ಕಾದಂಬರಿ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿವೆ. ಹಲವಾರು ಸಣ್ಣಕತೆಗಳನ್ನೂ ಬರೆದಿರುವ ಇವರು ಸುಮಾರು ಮೂವತ್ತಕ್ಕೂ ಹೆಚ್ಚು ಕತೆ, ಮತ್ತು ನೀಳ್ಗತೆಗಳನ್ನು ಬರೆದಿದ್ದು, ಇವೆಲ್ಲ ಸುಧಾ, ಮಯೂರ, ತುಷಾರ, ತುಮಕೂರಿನ ಪ್ರಜಾಪ್ರಗತಿ ದಿನಪತ್ರಿಕೆ ಮತ್ತು ಹಲವಾರು ಅಂತರ್ಜಾಲ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರ ಪ್ರಥಮ ಕಾದಂಬರಿ ಜಂಬೂಕ, ಬೆಂಗಳೂರಿನ ಹೇಮಂತ ಸಾಹಿತ್ಯದಿಂದ ಪುಸ್ತಕ ರೂಪದಲ್ಲಿ ಪ್ರಕಟವಾಗಿ ಬಿಡುಗಡೆಯಾಗಿದೆ.

ಇವರು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು ಪಾಲಿಟೆಕ್ನಿಕ್ ಮೂರನೆಯ ಮತ್ತು ನಾಲ್ಕನೆಯ ಸೆಮಿಸ್ಟರ್ ವಿದ್ಯಾರ್ಥಿಗಳಿಗಾಗಿ ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮುಖಾಂತರ ಹೊರತಂದಿರುವ ತಾಂತ್ರಿಕ ಕನ್ನಡ ಪಠ್ಯಪುಸ್ತಕದ ರಚನಾ ಸಮಿತಿಯ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದಾರೆ.

ಇವರ ಹೊಸ ಕಾದಂಬರಿ 'ಪ್ರೀತಿ ಪ್ರೇಮ ಡ್ರಾಮ', ಪ್ರೀತಿ ಪ್ರೇಮದ ತೊಳಲಾಟದ ವಿಭಿನ್ನ ಕಥಾನಕ. ನಿಜಕ್ಕೂ ಪ್ರೀತಿ ಎಂದರೆ ಏನು ಎಂದು ಜಿಜ್ಞಾಸೆ ಹುಟ್ಟಿಸುವ ಕೃತಿ.

ಹೋಗಿ ಮನೆಗೆ ಬೇಕಾದ ಸಾಮಾನುಗಳನ್ನೆಲ್ಲಾ ಹುಡುಕಿ ತೆಗೆದು ಪ್ಲಾಸ್ಟಿಕ್ ಬುಟ್ಟಿಯೊಂದರಲ್ಲಿ ಹಾಕಿಕೊಳ್ಳತೊಡಗಿದಳು. ನನಗೆ ನನ್ನನ್ನು ಹುಡುಕಿಕೊಂಡು ಬಂದ ಈ ಗಿರಿಧರ ಎನ್ನುವ ಆಗಂತುಕ ಯಾರಿರಬಹುದು.. ನನ್ನಿಂದ ಅವನಿಗೆ ಏನಾಗಬೇಕಾಗಿದೆ..? ಎಂಬುದನ್ನು ಯೋಚಿಸಿ ಯೋಚಿಸಿ ಸಾಕಾಯಿತು. ಯಾವುದೇ ಸುಳಿವು ಸಿಗಲಿಲ್ಲ. ಅಷ್ಟರಲ್ಲಿ ಶರಧಿ ಸಾಮಾನುಗಳನ್ನು ತೆಗೆದುಕೊಂಡು ಬಂದು ಬಿಲ್ಲಿನ ಕೌಂಟರಿನ ಮುಂದೆ ನಿಂತಿದ್ದಳು. ಬಿಲ್ ನೀಡಿ ಸಾಮಾನುಗಳು ತುಂಬಿದ ಪ್ಲಾಸ್ಟಿಕ್ ಕವರುಗಳನ್ನು ಕಾರಿನ ಹಿಂದಿನ ಸೀಟಿನಲ್ಲಿ ಇಟ್ಟು, ಶರಧಿ ಕಾರು ಹತ್ತಿದ ನಂತರ ಕಾರನ್ನು ಮನೆಯ ಕಡೆಗೆ ನಡೆಸಿದೆ. ದಾರಿಯ ಉದ್ದಕ್ಕೂ ನನ್ನನ್ನು ಹುಡುಕಿಕೊಂಡು ಬಂದ ಆಗಂತುಕ ನಕ್ಷತ್ರಿಕನಂತೆ ನನ್ನನ್ನು ಕಾಡತೊಡಗಿದ.

ಮನೆಗೆ ಬಂದು ಊಟಕ್ಕೆ ಕುಳಿತಾಗ 'ಶರೂ.. ಅವರು ಹೇಗಿದ್ರು.. ಎಂದೆ'

'ಯಾರು..?' ಎಂದು ಶರಧಿ ಪ್ರಶ್ನಿಸಿದಳು. 'ಅದೇ ನನ್ನನ್ನು ಹುಡುಕಿಕೊಂಡು ಬಂದವರು..' ಎಂದೆ.

'ಇನ್ನೂ ಯಂಗ್ ಫೆಲೋರೀ.. ನಿಮಗಿಂತ ಚಿಕ್ಕ ವಯಸ್ಸಿರಬಹುದು..' ಎಂದು ಶರಧಿ ನಿರ್ಲಿಪ್ತತೆಯಿಂದಲೇ ನುಡಿದಳು. ಯಾಕೋ ಏನೋ ವಿನಾಕಾರಣವಾಗಿ ಅವಳ ಮೇಲೆ ನನಗೆ ಸಿಟ್ಟು ಬಂದಿತು. ಆದರೆ ಅದನ್ನು ತೋರಿಸಿಕೊಳ್ಳಲಿಲ್ಲ. ನನ್ನ ಹೆಂಡತಿ ಸೌಮ್ಯ ಸ್ವಭಾವದ ಸ್ನಿಗ್ಧ ಸುಂದರಿ ಎನ್ನುವುದರಲ್ಲಿ ನನಗೆ ಯಾವುದೇ ಸಂಶಯವಿಲ್ಲ. ನನ್ನ ಅಪ್ಪ ಅಮ್ಮ ನನಗಾಗಿಯೇ ಹುಡುಕಿದವಳು. ಬಿಎಸ್ಸಿ ಪದವೀಧರೆ. ಬೆಂಗಳೂರು ಮಹಾನಗರದಲ್ಲಿಯೇ ಹುಟ್ಟಿ ಬೆಳೆದವಳು. ಸಾರ್ವಜನಿಕ ಉದ್ದಿಮೆಯೊಂದರಲ್ಲಿ ಉಪ ಪ್ರಧಾನ ವ್ಯವಸ್ಥಾಪಕರಾಗಿದ್ದ ಅವರ ಅಪ್ಪನ ಒಬ್ಬಳೇ ಮುದ್ದಿನ ಮಗಳು. ಮೊದಲ ನೋಟದಲ್ಲಿಯೇ ಅವಳ ಸೌಂದರ್ಯಕ್ಕೆ ನಾನು ಮಾರುಹೋಗಿದ್ದೆ. ಮದುವೆಯಾದ ಮೇಲೆ ಅವಳ ಹಾಲಿನಂತಹ ಮನಸ್ಸಿಗೆ ಮರುಳಾಗಿದ್ದೇನೆ. ಬೆಳಗಿನಿಂದ ರಾತ್ರಿಯವರೆಗೂ ಮನೆಯಲ್ಲಿ ಒಂಟಿಯಾಗಿದ್ದರೂ ನನ್ನ ವೃತ್ತಿಯ ಸಂಕೀರ್ಣತೆಗಳನ್ನು ಅರಿತುಕೊಂಡು ತುಸುವೂ ಗೊಣಗಾಡದೆ, ಬೇಸರ ಮಾಡಿಕೊಳ್ಳದೇ ನನ್ನ ಆಪ್ತಸ್ನೇಹಿತೆಯಂತಿರುವ ಅವಳನ್ನು ನನ್ನ ಜೀವನಸಂಗಾತಿಯಾಗಿ ಪಡೆದ ನಾನೇ ಧನ್ಯ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅವಳು ಮನೆಯಲ್ಲಿ ಒಂಟಿಯಾಗಿರುತ್ತಾಳೆ ಎಂಬ ಬಗ್ಗೆ ನನ್ನ ಮನಸ್ಸಿನ ಮೂಲೆಯಲ್ಲಿ ಅವ್ಯಕ್ತವಾದ ಒಂದು ಅಳುಕಂತೂ ಇದ್ದೇ ಇದೆ. ಆದುದರಿಂದಲೇ ನಾನೂ ಕೂಡ ದೈನಂದಿನ ಕಾರ್ಖಾನೆಯ ಕೆಲಸ ಮುಗಿದ ಮೇಲೆ ಮತ್ತು ರಜಾದಿನಗಳಲ್ಲಿ ಎಲ್ಲಿಯೂ ಒಬ್ಬನೇ ಹೊರಗೆ ಹೋಗದೆ ಅವಳಿಗಾಗಿಯೇ ನನ್ನ ಸಮಯವನ್ನು ಮೀಸಲಾಗಿಟ್ಟಿದ್ದೇನೆ. ಅವಳು ನನ್ನ ಮನಸ್ಸು ಮತ್ತು ದೇಹದ ಭಾಗವಾಗಿಯೇ ಹೋಗಿದ್ದಾಳೆ. ಆದರೂ ಆ ಕ್ಷಣದಲ್ಲಿ, ನನ್ನನ್ನು ಹುಡುಕಿಕೊಂಡು ನಾನಿಲ್ಲದ ವೇಳೆಯಲ್ಲಿ ಯಾವುದೇ ಪೂರ್ವಾಪರಗಳನ್ನು ತಿಳಿಸದೇ ಬರುತ್ತಿರುವ ಆಗಂತುಕನ ಬಗ್ಗೆ ನನಗೆ ತುಸು ಆತಂಕವಾಗಿ ಅವಳ ಮೇಲೆ ಸಿಟ್ಟು ಬಂದಿರಬಹುದು.

ಮೌನವಾಗಿ ಊಟ ಮಾಡಿ ಮುಗಿಸಿ ಮಲಗುವ ಕೋಣೆಗೆ ಹೋಗಿ ಅಂದಿನ ಕನ್ನಡ ದಿನಪತ್ರಿಕೆಯನ್ನು ಹಿಡಿದು ಹಾಸಿಗೆಯಲ್ಲಿ ಅಡ್ಡಾದೆ. ಪತ್ರಿಕೆಯ ಮೇಲೆ ಕಣ್ಣಾಡಿಸುತಿದ್ದರೂ ಮನಸ್ಸು ಆಗಂತುಕನ ಬಗ್ಗೆಯೇ ಯೋಚಿಸುತಿತ್ತು. ಪತ್ರಿಕೆಯನ್ನು ಮಡಿಚಿ ಅತ್ತ ಬದಿಗೆ ಇಟ್ಟು ಒಂದು ಕ್ಷಣ ಆಲೋಚನಾ ಮಗ್ನನಾದೆ. ಗಿರಿಧರ ಎನ್ನುವ ಆಗಂತುಕನ ಬಗ್ಗೆ ಕೊಂಚವೂ ಸುಳಿವು ಸಿಗಲಿಲ್ಲ. ಯಾರೋ ಏನೋ ಮತ್ತೆ ಬರಬಹುದು ನೋಡೋಣ ಎಂದುಕೊಂಡು ಮನಸ್ಸನ್ನು ನಿರಾಳವಾಗಿಸಿಕೊಂಡೆ. ಅಷ್ಟರಲ್ಲಿ ತನ್ನ ಅಡಿಗೆ ಮನೆಯ ಕೆಲಸವನ್ನೆಲ್ಲಾ ಮುಗಿಸಿಕೊಂಡು ಬಂದು ಹಾಸಿಗೆಯಲ್ಲಿ ಪವಡಿಸಿದ ಶರಧಿಯನ್ನು ಬರಸೆಳೆದು ಅಪ್ಪಿಕೊಂಡು ಮಲಗಿದೆ. ಯಾವಾಗ ನಿದ್ರೆ ಹತ್ತಿತೋ ತಿಳಿಯಲಿಲ್ಲ.

ಆ ವಾರದ ಮುಂದಿನ ದಿನಗಳು ಕಾರ್ಖಾನೆಯಲ್ಲಿ ಯಾವುದೋ ಬಿಡಿಭಾಗದ ಕೊರತೆಯುಂಟಾಗಿ ವಿಪರೀತ ಕೆಲಸದ ಒತ್ತಡವನ್ನು ಎದುರಿಸಬೇಕಾಯಿತು. ನನಗೆ ಮನೆಗೆ ಯಾವಾಗ ಬಂದೆ ಮನೆಯಿಂದ ಯಾವಾಗ ಹೋದೆ ಎಂಬುದೇ ನೆನಪಿನಲ್ಲಿ ಉಳಿಯಲಿಲ್ಲ. ನಮ್ಮ ಸಹಾಯಕ ವ್ಯವಸ್ಥಾಪಕರನ್ನು ಕೊಯಮತ್ತೂರಿನಲ್ಲಿದ್ದ ಸರಬರಾಜುದಾರರ ಕಾರ್ಖಾನೆಗೆ ಕಳುಹಿಸಿದ್ದೇ ಅಲ್ಲದೇ ನಾನೂ ಒಂದೇ ಸಮನೆ ಫೋನು ಮಾಡಿ ಕಾರ್ಖಾನೆಯ ಮಾಲೀಕರ ಬೆನ್ನು ಹತ್ತಿದೆ. ಪರಿಣಾಮವಾಗಿ ವಾರದ ಕೊನೆಯ ದಿನವಾದ ಶನಿವಾರದ ಬೆಳಗಿನ ಹತ್ತು ಗಂಟೆಗೆ ಮೂರು ತಿಂಗಳ ಉತ್ಪಾದನೆಗೆ ಸಾಕಾಗುವಷ್ಟು ಪ್ರಮಾಣದ ಆ ಬಿಡಿಭಾಗಗಳು ನಮ್ಮ ಕಾರ್ಖಾನೆಯನ್ನು ತಲುಪಿ ನನ್ನ ಆತಂಕ, ಒತ್ತಡಗಳು ಮರೆಯಾಗಿ ಮನಸ್ಸು ತಿಳಿಯಾಯಿತು. ಅಂದು ರಾತ್ರಿ ಎಂಟು ಗಂಟೆಗೆಲ್ಲಾ ಮನೆ ತಲುಪಿದೆ.

ಮರುದಿನ ಭಾನುವಾರವನ್ನು ಮನೆಯಲ್ಲಿಯೇ ಕುಳಿತು ಶರಧಿಯೊಡನೆ ಸರಸ ಸಲ್ಲಾಪದಲ್ಲಿ ತೊಡಗಿಕೊಂಡು ನಿಶ್ಚಿಂತೆಯಾಗಿ ಕಳೆದೆ.

ಮತ್ತೆ ಸೋಮವಾರ ಬಂದಿತು. ಅವತ್ತೂ ಕೂಡ ಕಾರ್ಖಾನೆಯಲ್ಲಿ ಯಾವುದೇ ಒತ್ತಡವಿರಲಿಲ್ಲ. ಸಂಜೆ ಏಳು ಗಂಟೆಗೆಲ್ಲಾ ಮನೆ ತಲುಪಿದೆ. ಕಾರನ್ನು ಪೋರ್ಟಿಕೋದ ಒಳಗೆ ನಿಲ್ಲಿಸಿ ಕೆಳಗಿಳಿಯುತಿದ್ದಂತೆಯೇ ಶರಧಿ 'ರೀ ಎಂತಾ ಕೆಲಸ ಆಗೋಯ್ತೂರೀ.. ಈಗ ಜಸ್ಟ್ ಐದು ನಿಮಿಷದ ಮುಂಚೆ